ಅನುಬಂಧ ಹಾವೇರಿ ಗದಗ್ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ದಿನಾಂಕ 1 1 20069 ರಿಂದ ದಿನಾಂಕ 31 12 20069 ರಿಂದ ದಿನಾಂಕ 31 12 2006 ರವರೆಗೆ ಸ್ತ್ರೀಶಕ್ತಿ ಯೋಜನೆಯಡಿ ಬಿಡುಗಡೆಯಾದ ಹಣದ ಜಿಲ್ಲಾವಾರು ವಿವರ

ಕ್ರ ಸಂ	ಜಿಲ್ಲೆಯ ಹೆಸರು	ವಸ್ತು ಪ್ರದರ್ಶನ ಮತ್ತು ಮಾರಾಟ	ಗಣಕ ಯಂತ್ರ ಖರೀದಿ	ಬ್ಲಾಕ್ ಸೊಸೈಟಿ ಫೆಡರೇಷನ್ ಬಂಡವಾಳ	ತರಬೇತಿ	ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ	ಗುಂಪುಗಳಿಗೆ ಪ್ರೋತ್ಸಾಹಧನ	ಗುಂಪುಗಳಿಗೆ ಪ್ರಶಸ್ತಿ	ಒಟ್ಟು
1	ಹಾವೇರಿ	0 75	0 50	2 10	4 18	10 07	4 35	0 09	22 04
2	ಧಾರವಾಡ	0 75	1 50	1 50	3 92	6 24	0	0 07	13 98
3	ಗದಗ್	0 75	2 00	1 50	7 85	6 68	2 35	0 07	21 20
	ಒಟ್ಟು	2 25	4 00	5 10	15 95	22 99	6 70	0 23	57 22

361 (333) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಲೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ವಿದ್ಯುತ್ ಕಂಪನಿಗಳು ಇವೆ ಯಾ ಯಾವ ದಿನಾಂಕದಿಂದ ಕೆಲಸ ನಿರ್ವಹಿಸುತ್ತಿವೆ (ಮಾಹಿತಿ ನೀಡುವುದು),

ಆ) ಈ ಪೈಕಿ ಲಾಭದಲ್ಲಿ ಮತ್ತು ನಷ್ಟದಲ್ಲಿ ನಡೆಯುತ್ತಿರುವ ಕಂಪನಿಗಳು ಯಾವುವು,

ಇ) ರಾಜ್ಯದಲ್ಲಿ ಎಲ್ಲ ವಿದ್ಯುತ್ ಉತ್ಪಾದನಾ ಸಂಸ್ಥೆಗಳಿಂದ ಎಷ್ಟು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ, (ಉತ್ಪಾದನಾ ಘಟಕವಾರು ವಿವರ ನೀಡುವುದು),

ಈ) ಒಟ್ಟು ಎಷ್ಟು ಸಾವಿರ ಮೆಗಾವ್ಯಾಟ್ ಬೇಡಿಕೆ ಇದೆ,

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ವಿದ್ಯುತ್ ವಿತರಣಾ ಚಟುವಟಿಕೆಗಳನ್ನು ಪ್ರತ್ಯೇಕಗೊಳಿಸಿ ರಾಜ್ಯದಲ್ಲಿ ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳು ಅಂದರೆ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಎಂಬ ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳು ದಿನಾಂಕ 1 6 2002 ರಿಂದ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಯೆಂಬ ಹೆಸರಿನ ಇನ್ನೊಂದು ವಿದ್ಯುತ್ ಸರಬರಾಜು ನಿಗಮ ನಿಯಮಿತವು ದಿನಾಂಕ 1 4 2005 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ

ಆ) 1 ಸರ್ಕಾರದಿಂದ ಬೇಕಾಗಿರುವ ಸಹಾಯಧನವನ್ನು ಪರಿಗಣಿಸಿ ಮಾಡಲಾಗಿರುವ ವಾರ್ಷಿಕ ಲೆಕ್ಕಗಳನ್ವಯ (ತೆರಿಗೆ ಪೂರ್ವ) ಯಾವುದೇ ವಿದ್ಯುತ್ ಸರಬರಾಜು ಕಂಪನಿಗಳು ನಷ್ಟವನ್ನು ಅನುಭವಿಸುತ್ತಿಲ್ಲ

2) ಸಹಾಯಧನದ ಅವಶ್ಯಕತೆಯನ್ನು ಅಕ್ರೂಯಲ್ ಆಧಾರದ ಮೇಲೆ ಶೇ 100 ರಷ್ಟು ರೆವಿನ್ಯೂ ವಸೂಲಾತಿಯನ್ನು ಪರಿಗಣಿಸಿ ಲೆಕ್ಕಚಾರ ಮಾಡಲಾಗಿದೆ

3) ವಾರ್ಷಿಕ ಲೆಕ್ಕಗಳ ಅನ್ವಯ ವಿದ್ಯುತ್ ಸರಬರಾಜು ಕಂಪನಿಗಳು ಲಾಭದಲ್ಲಿದ್ದರೂ ಸಹ, ಅವುಗಳಿಗೆ ಸರ್ಕಾರದಿಂದ ಬರಬೇಕಾದ ಸಹಾಯಧನದ ಬಾಕಿ ಮತ್ತು ಬಳಕೆದಾರರಿಂದ ಬರಬೇಕಾಗಿರುವ ಬಾಕಿಯ ಕಾರಣ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ವರ್ಷ ಕ್ಯಾಷ್ ಕೊರತೆಯನ್ನು ಅನುಭವಿಸುತ್ತಿವೆ ಶೇಕಡ 100 ರಷ್ಟು ರೆವಿನ್ಯೂ ವಸೂಲಾತಿ ಆಗದ ತನಕ ವಿದ್ಯುತ್ ಸರಬರಾಜು ಕಂಪನಿಗಳು ಕ್ಯಾಷ್ ಕೊರತೆಯನ್ನು ಅನುಭವಿಸುತ್ತವೆ

ಇ) ರಾಜ್ಯದಲ್ಲಿನ ವಿದ್ಯುತ್ ಉತ್ಪಾದನಾ ಕೇಂದ್ರಗಳ ಒಟ್ಟು ಉತ್ಪಾದನಾ ಸಾಮರ್ಥ್ಯವು 6,792 50 ಮೆ ವ್ಯಾಟ್‌ಗಳು ಹಾಗೂ ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ (ಸಿ ಜಿ ಎಸ್) ಪಡೆಯಲಾಗುತ್ತಿರುವ ರಾಜ್ಯದ ಪಾಲು 1,256 ಮೆ ವ್ಯಾಟ್ ಗಳು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಈ) ಪ್ರಸಕ್ತ ವರ್ಷವಾದ 2006–07ರಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು ಸುಮಾರು 7353 ಮೆ ವ್ಯಾಟ್ ಗಳೆಂದು ಅಂದಾಜು ಮಾಡಲಾಗಿದೆ

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 333ಕ್ಕೆ ಅನುಬಂಧ

ರಾಜ್ಯದಲ್ಲಿನ ವಿದ್ಯುತ್ ಉತ್ಪಾದನಾ ಕೇಂದ್ರಗಳ ಉತ್ಪಾದನಾ ಸಾಮರ್ಥ್ಯ ಹಾಗು ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ (ಸಿಜಿಎಸ್) ಪಡೆಯಲಾಗುತ್ತಿರುವ ರಾಜ್ಯದ ಪಾಲುಗಳ ವಿವರಗಳು

ಕ್ರ.ಸಂ	ವಿದ್ಯುತ್ ಉತ್ಪಾದನಾ ಕೇಂದ್ರಗಳು	ವಿದ್ಯುತ್ ಉತ್ಪಾದನಾ ಸಾಮರ್ಥ್ಯ (ಮೆಗಾ ವ್ಯಾಟ್ ಗಳಲ್ಲಿ)
(ಅ)	**ಕೆ ಪಿ ಸಿಎಲ್**	
	ಜಲ ವಿದ್ಯುತ್	
1	ಶರಾವತಿ	1035
2	ಲಿಂಗನಮಕ್ಕಿ	55
3	ಗೇರುಸೊಪ್ಪ	240
4	ನಾಗಝರಿ	855
5	ಸೂಪ	100
6	ಘಟಪ್ರಭ	32
7	ವರಾಹಿ	230
8	ಮಾಣಿ ಡ್ಯಾಂ	9
9	ಭದ್ರಾ	39 2
10	ಕದ್ರ	150
11	ಕೊಡಸಳ್ಳಿ	120
12	ಕಲ್ಪಲಾ	0 4
13	ಸಿರ್ ವಾರ್	1
14	ಗಾಣೆಕಲ್	0 35
15	ಮಲ್ಲಾಪುರ	9
16	ಆಲಮಟ್ಟಿ	290
	ಒಟ್ಟು ಜಲ ವಿದ್ಯುತ್	3165 95
	ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ	
17	ಆರ್ ಟಿ ಪಿ ಎಸ್ (ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ	1470
	ಗ್ಯಾಳಿ ಆಧಾರಿತ	

18	ಕಪ್ಪದ ಗುಡ್ಡ	4 56
	ಒಟ್ಟು ಕೆ ಪಿ ಸಿ ಎಲ್ (ಅ)	4640 51
(ಆ)	**ವಿ ವಿ ಎನ್ ಎಲ್**	
	ಜಲ ವಿದ್ಯುತ್	
1	ಎಂ ಜಿ ಹೆಚ್ ಇ	139 2
2	ಶಿವನ ಸಮುದ್ರ	42
3	ಶಿಂಷಾ	17 2
4	ಮುನಿರಾಬಾದ್	28
5	ಟಿ ಬಿ ಡ್ಯಾಂ (ರಾಜ್ಯದ ಪಾಲು)	14 4
	ಒಟ್ಟು ಜಲ ವಿದ್ಯುತ್	240 8
	ಶಾಖೋತ್ಪನ್ನ	
6	ಯಲಹಂಕ ಡಿ ಜಿ ಸ್ಟೇಷನ್	127 92
	ಒಟ್ಟು ವಿ ವಿ ಎನ್ ಎಲ್ (ಆ)	368 72
(ಇ)	**ಸ್ವತಂತ್ರ ವಿದ್ಯುತ್ ಉತ್ಪಾದಕರು (ಐ ಪಿ ಪಿ)ಗಳು**	
1	ತಣ್ಣೀರು ಬಾವಿ (ಜಿ ಎಂ ಆರ್)	220
2	ರಾಯಲ್ ಸೀಮ ಎ ಎ ಸಿ ಎಲ್	27 8
3	ಟಾಟಾ ಪವರ್ ಕಂಪನಿ	81 3
4	ಜೆ ಟಿ ಪಿ ಸಿ ಎಲ್	260
	ಒಟ್ಟು	589 10
	ಅಸಂಪ್ರದಾಯ ಇಂಧನ ಮೂಲಗಳು (ಎನ್ ಸಿ ಇ ಪ್ರಾಜೆಕ್ಟ್)	
1	ಕೋ-ಜನರೇಷನ್	334 64
2	ಗಾಳಿ ಆಧಾರಿತ ವಿದ್ಯುತ್ ಉತ್ಪಾದನೆ	548 75
3	ಕಿರುಜಲ ವಿದ್ಯುತ್ ಉತ್ಪಾದನೆ	224 98
4	ಬಯೋಮಾಸ್	85 8
	ಒಟ್ಟು	1194 17
	ಒಟ್ಟು ಐ ಪಿ ಸಿಗಳು ಮತ್ತು ಅಸಂಪ್ರದಾಯ ಇಂಧನ ಮೂಲಗಳು (ಇ)	1783 27
	ರಾಜ್ಯದ ಆಂತರಿಕ ವಿದ್ಯುತ್ ಉತ್ಪದನಾ ಸಾಮರ್ಥ್ಯದ ಒಟ್ಟು ಮೊತ್ತ (ಅ+ ಆ +ಇ)	6792 50

ಈ	ಕೇಂದ್ರೀಯ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ರಾಜ್ಯದ ಪಾಲು	
1	ರಾಮಗುಂಡಂ ಎಸ್ ಟಿ ಪಿ ಎನ್	345
2	ನ್ಪೆವೇಲಿ ಲಿಗ್ನೈಟ್ ನಿಗಮ 1	84
3	ನ್ಪೆವೇಲಿ ಲಿಗ್ನೈಟ್ ನಿಗಮ 2	115
4	ನ್ಪೆವೇಲಿ ಲಿಗ್ನೈಟ್ ನಿಗಮ ವಿಸ್ತರಣೆ	100
5	ಮದ್ರಾಸ್ ಅಣು ವಿದ್ಯುತ್ ಕೇಂದ್ರ	21
6	ಕೈಗಾ ಅಣು ವಿದ್ಯುತ್ ಕೇಂದ್ರ	108
7	ತಾಲ್ಚೇರ್	396
8	ರಾಮಗುಂಡಂ ಹಂತ–3	87
	ಒಟ್ಟು (ಈ)	1256
	ಒಟ್ಟು ಮೊತ್ತ (ಅ+ ಆ +ಇ+ ಈ)	8048 50

362 (334) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮಹಿಳಾ ಮತ್ತು ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹರ ಮತಕ್ಷೇತ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಮಿತಿಗಳನ್ನು ರಚನೆ ಮಾಡದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ನೇಮಕಾತಿ ಸಮಿತಿಗಳ ರಚನೆ ವಿಳಂಬಕ್ಕೆ ಕಾರಣಗಳೇನು,

ಇ) ವಿಳಂಬ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ,

ಈ) ಬಂದಿದ್ದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಮಿತಿಗಳನ್ನು ಇನ್ನು ಎಷ್ಟು ದಿನದೊಳಗೆ ರಚನೆ ಮಾಡಲಾಗುವುದು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಕಲ್ಯಾಣ ಸಚಿವರು)

ಅ) ಪ್ರಕ್ರಿಯೆಯನ್ನು ಸರ್ಕಾರವು ಸದ್ಯಕ್ಕೆ ಸ್ಥಗಿತಗೊಳಿಸಿದೆ

ಆ) ರಾಜ್ಯಕ್ಕೆ ಮಂಜೂರಾಗಿರುವ ಹೊಸ 11,313 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುವುದಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ಮಮಇ 199 ಐಸಿಡಿ 2006, ದಿ 15 7 2006ರಲ್ಲಿ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಮಿತಿಯನ್ನು ಮನರ್ ರಚಿಸಲಾಗಿದೆ ಅದಕ್ಕೆ ಮುಂದುವರಿದಂತೆ ದಿ 21 7 2006 ಮತ್ತು 7 9 2006ರಂದು ಮತ್ತೆ ಎರಡು ಆದೇಶಗಳನ್ನು